RNU AIR DHARWAD

OCTOBER 04, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಬೆಳಗಾವಿಯ, ನೂತನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,** ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಲೋಕಾರ್ಪಣೆ.

**'ಅಮೃತ ಭಾರತ' ಯೋಜನೆ;** ಮರು ಅಭಿವೃದ್ಧಿಪಡಿಸಿದ, ಧಾರವಾಡ ಜಿಲ್ಲೆ, ಅಳ್ನಾವರ ರೈಲು ನಿಲ್ದಾಣ ಸದ್ಯದಲ್ಲೇ ಉದ್ಘಾಟನೆ.

**ರಾಯಚೂರು ಜಿಲ್ಲೆಯ** ಕೆರೆಗಳ ಸಮಗ್ರ ಅಭಿವೃದ್ಧಿಗೆ, ಕೇಂದ್ರದ ಜಲ ತಜ್ಞರ ತಂಡ, ಶೀಘ್ರ ಭೇಟಿ.

**ಜವಾಹರ ನವೋದಯ** ಹಾಗೂ ಏಕಲವ್ಯ ವಸತಿ ಶಾಲೆಗಳ, ಸಾವಿರದ ಇನ್ನೂರು ನೂತನ ಪ್ರಯೋಗಾಲಯಗಳಿಗೆ, ಪ್ರಧಾನಮಂತ್ರಿ ಇಂದು ಚಾಲನೆ.

<><><>

**ಬೆಳಗಾವಿಯಲ್ಲಿ ನೂತನವಾಗಿ ನಿರ್ಮಾಣಗೊಂಡ,** ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ ಕಟ್ಟಡ ಹಾಗೂ ವೈದ್ಯರ ವಸತಿ ಗೃಹಗಳನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಉದ್ಘಾಟಿಸಲಿದ್ದಾರೆ. ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ ಇಂದು, ಮಧ್ಯಾಹ್ನ 12 ಗಂಟೆಗೆ ಕಾರ್ಯಕ್ರಮ ಜರುಗಲಿದೆ. ಸಕ್ಷಮ ನಗರ ಅನುದಾನದಡಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ, ಬೆಳಗಾವಿ ನಗರ ಸಾರಿಗೆ ಬಸ್ ನಿಲ್ದಾಣ ಸಹ ಈ ಸಂದರ್ಭದಲ್ಲಿ, ಅನಾವರಣಗೊಳ್ಳಲಿದೆ. ಹಿರೇ ಬಾಗೇವಾಡಿಯಲ್ಲಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ, ನೂತನ ಕಟ್ಟಡ ನಿರ್ಮಾಣಕ್ಕೆ, ಪ್ರಧಾನಮಂತ್ರಿ ಉಷಾ ಯೋಜನೆಯಡಿ ಮುಖ್ಯಮಂತ್ರಿ ಶಂಕು ಸ್ಥಾಪನೆ, ನೆರವೇರಿಸಲಿದ್ದಾರೆ.

<><><>

**'ಅಮೃತ ಭಾರತ' ಯೋಜನೆಯಡಿ,** ಮರು ಅಭಿವೃದ್ಧಿಪಡಿಸಿ, ಮೇಲ್ದರ್ಜೆಗೇರಿಸಲಾದ, ಧಾರವಾಡ ಜಿಲ್ಲೆ, ಅಳ್ನಾವರ ರೈಲು ನಿಲ್ದಾಣ ಸದ್ಯದಲ್ಲೇ ಉದ್ಘಾಟನೆಯಾಗಲಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಹುಬ್ಬಳ್ಳಿಯ ರೇಲ್ವೆ ಸೌಧದಲ್ಲಿ, ಹಿರಿಯ ಅಧಿಕಾರಿಗಳೊಂದಿಗೆ ಅವರು ಸಭೆ ನಡೆಸಿದರು. ಹುಬ್ಬಳ್ಳಿ, ಅಂಕೋಲಾ ರೇಲ್ವೆ ಮಾರ್ಗ, ಬಂದರಕ್ಕೆ ಸಂಪರ್ಕ ಕಲ್ಪಿಸಲಿದೆ. ಬೆಳಗಾವಿಯಿಂದ ಸರಕು ಸಾಗಣೆ ಸರಳ ಮತ್ತು ಸುಲಭವಾಗಲಿದೆ ಎಂದರು. ಹುಬ್ಬಳ್ಳಿ ರೇಲ್ವೆ ಮೈದಾನದಲ್ಲಿ, 9 ಕೋಟಿ ರೂಪಾಯಿ ವೆಚ್ಚದಲ್ಲಿ, ಹಾಕಿ ಕ್ರೀಡೆಗಾಗಿ ನೂತನ ಟರ್ಫ್ ನಿರ್ಮಿಸಲು, ಪ್ರಸ್ತಾಪ ಮಂಡಳಿ ಸಿದ್ಧಪಡಿಸಿದೆ. ಹುಬ್ಬಳ್ಳಿ – ಧಾರವಾಡದ ಕ್ರೀಡಾ ಸಂಕೀರ್ಣಗಳಲ್ಲಿ ಲಭ್ಯವಿರದ ಕ್ರೀಡೆಗಳ, ಕ್ರೀಡಾಂಕಣಗಳನ್ನು ರೇಲ್ವೆ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಿರ್ಮಿಸಿ, ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟ ಆಯೋಜನೆಗೆ, ಅನುಕೂಲ ಕಲ್ಪಿಸಲು ಸೂಚಿಸಿದ್ದಾಗಿ, ಸಚಿವ ಜೋಶಿ ಹೇಳಿದರು.

<><><>

**ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ** ಕಾರ್ಯ, ರಾಜ್ಯದಲ್ಲಿ ಯಶಸ್ವಿಯಾಗಿ ಮುನ್ನಡೆದಿದೆ; ಇಲ್ಲಿಯ ವರಗೆ, 80 ಲಕ್ಷ ಮನೆಗಳ, 3 ಕೋಟಿ ಜನರ ಸಮೀಕ್ಷೆ ಪೂರ್ಣಗೊಂಡಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಎಕ್ಸ್ ಮಾಧ್ಯಮದಲ್ಲಿ, ತಿಳಿಸಿದ್ದಾರೆ.

ಬರುವ ಮಂಗಳವಾರ, 7ನೇ ತಾರೀಖು, ಸಮೀಕ್ಷೆ ಪೂರ್ಣಗೊಳ್ಳುವ ಭರವಸೆಯಿದೆ. ರಾಜ್ಯದ ಒಟ್ಟು 1 ಕೋಟಿ 80 ಲಕ್ಷ ಕುಟುಂಬಗಳ ಸಮೀಕ್ಷೆ, ನಡೆಯಬೇಕಿದೆ. ಬಳಿಕ ಹಿಂದುಳಿದ ವರ್ಗಗಳ ಆಯೋಗ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಲಿದೆ ಎಂದರು.

<><><>

**ಧಾರವಾಡ ಜಿಲ್ಲಾ ಪಂಚಾಯಿತಿ** ಸಿ.ಇ.ಓ. ಭುವನೇಶ ಪಾಟೀಲ, ನಿತ್ಯ 300 ರಿಂದ 400 ಮನೆಗಳ ಸಮೀಕ್ಷೆ ಕೈಗೊಂಡು, ಗುರಿ ಸಾಧಿಸುವಂತೆ, ಸಮೀಕ್ಷಕರಿಗೆ ಸೂಚಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ, ಶೇಕಡ 63 ದಶಾಂಶ 4–6ರಷ್ಟು ಸಮೀಕ್ಷೆ ಕೈಗೊಳ್ಳಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ.

<><><>

**ರಾಯಚೂರು ಜಿಲ್ಲೆಯ** ಕೆರೆಗಳ ಸಮಗ್ರ ಅಭಿವೃದ್ಧಿಗೆ, ಕೇಂದ್ರದ ಜಲ ತಜ್ಞರ ತಂಡ, ಶೀಘ್ರ ಭೇಟಿ ನೀಡಲಿದೆ ಎಂದು, ಕೇಂದ್ರ ಜಲಶಕ್ತಿ ಸಚಿವಾಲಯದ, ನದಿ ಅಭಿವೃದ್ಧಿ ಹಾಗೂ ಪುನರುಜ್ಜೀವನ ಇಲಾಖೆ, ಅಪರ ಕಾರ್ಯದರ್ಶಿ, ಸುಭೋದ ಯಾದವ ತಿಳಿಸಿದ್ದಾರೆ. ಜಿಲ್ಲೆಯ ಮಹತ್ವಾಕಾಂಕ್ಷಿ ಬ್ಲಾಕ್‌ಗಳಾದ, ಸಿರವಾರ ಹಾಗೂ ಮಸ್ಕಿ ತಾಲೂಕಿನ, ಕಲ್ಲೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮಾನ್ವಿಯ, ತಾಯಿ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಅವರು ಪರಿಶೀಲಿಸಿದರು.

<><><>

**ವಿಜಯಪುರ ಜಿಲ್ಲೆಯಲ್ಲಿ,** ಪ್ರಸಕ್ತ ಮುಂಗಾರಿನಲ್ಲಿ, ರಾಜ್ಯದಲ್ಲಿಯೇ ಅತಿ ಹೆಚ್ಚು ಮಳೆ ದಾಖಲಾಗಿದೆ. 2 ಲಕ್ಷದ 45 ಸಾವಿರ ಹೆಕ್ಟರ್ ಬೆಳೆ ಹಾನಿ ಅಂದಾಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ. ಆನಂದ ತಿಳಿಸಿದ್ದಾರೆ. ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ಅವರೊಂದಿಗೆ, ಜಿಲ್ಲಾಧಿಕಾರಿ ವಿಡಿಯೋ ಸಂವಾದದಲ್ಲಿ ಪಾಲ್ಗೊಂಡು, ಬಳಿಕ, ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಸಭೆ ನಡೆಸಿ, ಮಾತನಾಡಿದರು.

<><><>

**ಉತ್ತರ ಕರ್ನಾಟಕದ ನೆರೆ ಹಾವಳಿ** ಅಧ್ಯಯನಕ್ಕೆ ಪ್ರವಾಸ ಕೈಗೊಂಡಿರುವ, ವಿಧಾನಸಭೆ ವಿಪಕ್ಷ ನಾಯಕ, ಆರ್.ಅಶೋಕ ನೇತೃತ್ವದ, ಬಿಜೆಪಿ ಮುಖಂಡರ ನಿಯೋಗ, ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿ ಅವಲೋಕಿಸಿತು. ಈ ಸಂದರ್ಭದಲ್ಲಿ ಮಾತನಾಡಿದ ವಿಪಕ್ಷ ನಾಯಕ, ರಾಜ್ಯದ ನೆರೆ ಸಂತ್ರಸ್ತರಿಗೆ, ರಾಜ್ಯ ಸರ್ಕಾರ ಶೀಘ್ರ ಸೂಕ್ತ ಪರಿಹಾರ ನೀಡಬೇಕು. ಜಾತಿ ಸಮೀಕ್ಷೆಯ ಮಧ್ಯೆ, ಪ್ರವಾಹ ಸಂತ್ರಸ್ತರ ಬವಣೆಗಳನ್ನು ಮರೆಯಬಾರದು ಎಂದು, ಆಗ್ರಹಿಸಿದರು.

<><><>

**ದೇಶಾದ್ಯಂತ ಕಾರ್ಯನಿರ್ವಹಿಸುತ್ತಿರುವ,** ನವೋದಯ ವಿದ್ಯಾಲಯ ಹಾಗೂ ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ, ನೂತನವಾಗಿ ಸ್ಥಾಪಿಸಲಾದ, ಸಾವಿರದ 200 ವೃತ್ತಿಪರ ಪ್ರಯೋಗಾಲಯಗಳಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಇಂದು ಹೊಸದಿಲ್ಲಿಯಲ್ಲಿ, ಚಾಲನೆ ನೀಡಲಿದ್ದಾರೆ. 34 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ, ಯುವಜನ ಸಬಲೀಕರಣ ಇಲಾಖೆಗೆ ಸಂಬಂಧಿತ, 62 ಸಾವಿರ ಕೋಟಿ ರೂಪಾಯಿ ಮೌಲ್ಯದ, ವಿವಿಧ ಅಭಿವೃದ್ಧಿ ಯೋಜನೆಗಳನ್ನು ಪ್ರಧಾನಮಂತ್ರಿ ಉದ್ಘಾಟಿಸಲಿದ್ದಾರೆ. ಯುವಜನತೆಯಲ್ಲಿ ಕೌಶಲ ನಿರ್ಮಾಣಕ್ಕಾಗಿ, ದೇಶಾದ್ಯಂತ ಸಾವಿರ ಕೈಗಾರಿಕಾ ತರಬೇತಿ ಕೇಂದ್ರ– ಐ.ಟಿ.ಐ.ಗಳ ಸ್ಥಾಪನೆಗಾಗಿ, ಪಿ.ಎಂ. ಸೇತು ಯೋಜನೆಗೂ ಈ ಸಂದರ್ಭದಲ್ಲಿ ಚಾಲನೆ ದೊರೆಯಲಿದೆ.

<><><>

**ಇಂದು ವಿಶ್ವ ಪ್ರಾಣಿ ದಿನ.** 'ಪ್ರಾಣಿ ಸಂಕುಲದೊಂದಿಗೆ, ಭೂ ಗ್ರಹವನ್ನು ಸಂರಕ್ಷಿಸೋಣ' ಎಂಬ ಧ್ಯೇಯದೊಂದಿಗೆ, ಈ ಬಾರಿ ನೂರನೇ ವ ರ್ಷಾಚರಣೆ. ವಿಶ್ವ ಪ್ರಾಣಿ ದಿನದ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಧಾರವಾಡದ, ಕರ್ನಾಟಕ ವಿಶ್ವವಿದ್ಯಾಲಯದ, ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗದ ಮುಖ್ಯಸ್ಥರಾದ, ಗಿರೀಶ ಕಾಡದೇವರು.

<><><>

**ಮೈಸೂರು ಶ್ರೀ ಚಾಮರಾಜೇಂದ್ರ ಮೃಗಾಲಯ,** 71ನೇ ವನ್ಯಜೀವಿ ಸಪ್ತಾಹದ ಹಿನ್ನೆಲೆ, ಈ ತಿಂಗಳ 8ನೇ ತಾರೀಖಿನ ವರೆಗೆ, ವನ್ಯಜೀವಿಗಳ ಸಂರಕ್ಷಣೆ ಜಾಗೃತಿ ಸಪ್ತಾಹ ಆಯೋಜಿಸಿದೆ. ಇಂದು, ಅಂತಾರಾಷ್ಟ್ರೀಯ ಮೃಗಾಲಯ ಪಾಲಕರ ದಿನದ ಅಂಗವಾಗಿ, ವಿಶೇಷ ವಿಡಿಯೋ ಬಿಡುಗಡೆ ಮಾಡಲಾಗುತ್ತಿದೆ.

<><><>

**ನಾಡಿನ ಹೆಸರಾಂತ ಹಿರಿಯ ಪತ್ರಕರ್ತ,** ಅಂಕಣಕಾರ, ಪದ್ಮಭೂಷಣ, ಥಾಯಿಲ್ ಜಾಕೋಬ್ ಸೋನಿ ಜಾರ್ಜ್, ಟಿ.ಜೆ.ಎಸ್ ಜಾರ್ಜ್ ಬೆಂಗಳೂರಿನಲ್ಲಿ ನಿನ್ನೆ ನಿಧನರಾದರು. ಅವರಿಗೆ 97 ವರ್ಷ ವಯಸ್ಸಾಗಿತ್ತು. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕಾ ಸಮೂಹದ, ಸಂಪಾದಕೀಯ ಸಲಹೆಗಾರ ಹಾಗೂ ನಿರ್ದೇಶಕರಾಗಿದ್ದ, ಜಾರ್ಜ್ ಏಷಿಯನ್ ಇನ್ಸ್ಟಿಟ್ಯೂಟ್ ಆಫ್ ಜರ್ನಲಿಸಂ, ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದವರು. ನಾಳೆ ಮಧ್ಯಾಹ್ನ ಬೆಂಗಳೂರಿನಲ್ಲಿ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ, ಅನೇಕ ಗಣ್ಯರು ಸಂತಾಪ ವ್ಯಕ್ತ ಪಡಿಸಿದ್ದಾರೆ.

<><><>

**ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು,** ಲೋಂಡಾ ಗ್ರಾಮದ ಮೂವರು, ಸಿಂಧುದುರ್ಗ ಬಳಿಯ, ಸೀರೋಡಾ ಸಮುದ್ರ ತೀರದಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ನಾಲ್ವರು ನಾಪತ್ತೆಯಾಗಿದ್ದಾರೆ. ಓರ್ವ ಮಹಿಳೆಯನ್ನು ರಕ್ಷಿಸಿ, ಸ್ಥಳೀಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಒಟ್ಟು 8 ಜನರ ತಂಡ ಪ್ರವಾಸ ಕೈಗೊಂಡಿತ್ತು ಎಂದು, ಪ್ರಾಥಮಿಕ ಮಾಹಿತಿ ದೊರೆತಿದೆ.

<><><>

**ಚಿಕ್ಕಬಳ್ಳಾಪುರ ಜಿಲ್ಲೆ,** ಬಾಗೇಪಲ್ಲಿ ತಾಲೂಕು, ಮಿಟ್ಟೇಮರಿ ಹೋಬಳಿ, ಆಚೇಪಲ್ಲಿ ಗ್ರಾಮದ ಕೆರೆಯಲ್ಲಿ ಮೂವರು ಬಾಲಕರು, ಮುಳುಗಿ ಮೃತಪಟ್ಟಿದ್ದಾರೆ. ಗ್ರಾಮದ ಬೂರಮಡುಗು ರಸ್ತೆಯ, ಹಳೆ ಕೆರೆಯಲ್ಲಿ ಈಜಲು ತೆರಳಿದ್ದ, ವಿಷ್ಣುವರ್ಧನ, ನಿಹಾಲ ರಾಜ ಹಾಗೂ ರಕ್ಷಿಸಲು ಮುಂದಾದ, ಹರ್ಷವರ್ಧನ ಎಂಬ ಬಾಲಕ ಸಹ ಮುಳುಗಿ, ಸಾವನ್ನಪ್ಪಿದ್ದಾರೆ.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ,** ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಜಿ.ಕೆ. ಆದಪ್ಪಗೌಡರ ಹಾಗೂ ಉಪಾಧ್ಯಕ್ಷರಾಗಿ ಪ್ರವೀಣ ಅಗಡಿ, ಸಿದ್ದೇಶ್ವರ ಕಮ್ಮಾರ ಮತ್ತು ವೀರಣ್ಣ ಕಲ್ಲೂರ ಆಯ್ಕೆಯಾಗಿದ್ದಾರೆ. ನೂತನ ಪದಾಧಿಕಾರಿಗಳು, ಹುಬ್ಬಳ್ಳಿಯ ಶ್ರೀ ಸಿದ್ದಾರೂಢ ಸ್ವಾಮೀಜಿ ಮಠಕ್ಕೆ ಭೇಟಿ ನೀಡಿ, ಉಭಯ ಶ್ರೀಗಳ ದರ್ಶನ ಪಡೆದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಬೆಳಗಾವಿಯ, ನೂತನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,** ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಲೋಕಾರ್ಪಣೆ.

**'ಅಮೃತ ಭಾರತ' ಯೋಜನೆ;** ಮರು ಅಭಿವೃದ್ಧಿಪಡಿಸಿದ, ಧಾರವಾಡ ಜಿಲ್ಲೆ, ಅಳ್ನಾವರ ರೈಲು ನಿಲ್ದಾಣ ಸದ್ಯದಲ್ಲೇ ಉದ್ಘಾಟನೆ.

**ರಾಯಚೂರು ಜಿಲ್ಲೆಯ** ಕೆರೆಗಳ ಸಮಗ್ರ ಅಭಿವೃದ್ಧಿಗೆ, ಕೇಂದ್ರದ ಜಲ ತಜ್ಞರ ತಂಡ, ಶೀಘ್ರ ಭೇಟಿ.

**ಜವಾಹರ ನವೋದಯ** ಹಾಗೂ ಏಕಲವ್ಯ ವಸತಿ ಶಾಲೆಗಳ, ಸಾವಿರದ ಇನ್ನೂರು ನೂತನ ಪ್ರಯೋಗಾಲಯಗಳಿಗೆ, ಪ್ರಧಾನಮಂತ್ರಿ ಇಂದು ಚಾಲನೆ.

<><><>